ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1912
2) ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 16-03-2022
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ 5 ವರ್ಷಗಳಿಂದ ಮೀನುಗಾರಿಕೆ ಇಲಾಖೆಯಿಂದ ಯಾವ ಯಾವ ಯೋಜನೆಗಳಲ್ಲಿ ಫಲಾನುಭವಿಗಳಿಗೆ ಸಾಲ ಸೌಲಭ್ಯಗಳು ದೊರಕಿರುತ್ತವೆ; ಈ ಫಲಾನುಭವಿಗಳ ಆಯ್ಕೆಯನ್ನು ಯಾವ ಹಂತದಲ್ಲಿ ಮಾಡಲಾಗಿದೆ; (ವಿವರ ನೀಡುವುದು)	ಮೀನುಗಾರಿಕೆ ಇಲಾಖೆಯಲ್ಲಿ ಯಾವುದೇ ಸಾಲ ಸೌಲಭ್ಯ ಆಧಾರಿತ ಯೋಜನೆಗಳು ಇರುವುದಿಲ್ಲ.
ಆ)	ಈ ಯೋಜನೆಗಳಿಗಾಗಿ ಎಷ್ಟು ಅನುದಾನ ಮೀಸಲಿಸಲಾಗಿತ್ತು ಮತ್ತು ಎಷ್ಟು ಅನುದಾನ ಖರ್ಚು ಮಾಡಲಾಗಿದೆ; (ವಿವರ ನೀಡುವುದು)	ಅನ್ವಯಿಸುವುದಿಲ್ಲ.
ಇ)	ಜಿಲ್ಲೆಯ ಕಾರಂಜ ಡ್ಯಾಂ ಹತ್ತಿರ ಮೀನು ಸಾಕಾಣಿಕೆ (POND) ನಿರ್ಮಾಣ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಇದರ ಮುಖ್ಯ ಉಸ್ತುವಾರಿ ನೋಡಿಕೊಳ್ಳುವುದು ಯಾರು; ಮತ್ತು ಇದರಲ್ಲಿ ಎಷ್ಟು ಸಂಖ್ಯೆಯಲ್ಲಿ ಮೀನು ಸಾಕಾಣಿಕೆ ಮಾಡಲಾಗಿದೆ? (ಕಳೆದ 5 ವರ್ಷದ ವಿವರ ನೀಡುವುದು)	ಜಿಲ್ಲೆಯ ಕಾರಂಜಾ ಡ್ಯಾಂ ಹತ್ತಿರ ಇಲಾಖಾ ಮೀನುಮರಿ ಪಾಲನಾ ಕೇಂದ್ರವಿದ್ದು, ಇದರ ಉಸ್ತುವಾರಿ ಅಧಿಕಾರಿ ಮೀನುಗಾರಿಕೆ ಸಹಾಯಕ ನಿರ್ದೇಶಕರು ಮೀನುಮರಿ ಪಾಲನಾ ಕೇಂದ್ರ, ಕಾರಂಜಾ, ಬೀದರ್ ರವರಾಗಿರುತ್ತಾರೆ. ಕಾರಂಜಾ ಮೀನುಮರಿ ಪಾಲನಾ ಕೇಂದ್ರವು ಶಿಥಿಲಗೊಂಡಿದ್ದು, ಕಳೆದ 5 ವರ್ಷಗಳಲ್ಲಿ ಯಾವುದೇ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಂಡಿರುವುದಿಲ್ಲ.

ಸಂಖ್ಯೆ: ಪಸಂಮೀ ಇ-76 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು